ಕರ್ನಾಟಕ ಸರ್ಕಾರ

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು

1) **2019–20ನೇ ಸಾಲಿನ ಬಿ.ಎಸ್.ಸಿ ನರ್ಸಿಂಗ್ ಬಿ.ಪಿ.ಒ., ಬಿ.ಪಿ.ಟಿ. ಮತ್ತು ಬಿ.ಎಸ್.ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸುಗಳ ಪ್ರವೇಶಕ್ಕಾಗಿ ದಾಖಲಾತಿಗಳ ಪರಿಶೀಲನೆ – ಸೂಚನೆಗಳು.**

2) ಎಲ್ಲಾ ಅಭ್ಯರ್ಥಿಗಳ ಅಂದರೆ ಸಾಮಾನ್ಯ ವರ್ಗ ಮೀಸಲಾತಿ ಪ್ರವರ್ಗಗಳು ಮತ್ತು ವಿಶೇಷ ಪ್ರವರ್ಗದ ಎಲ್ಲಾ ವಿದ್ಯಾರ್ಥಿಗಳು ದಾಖಲಾತಿ ಪರಿಶೀಲನೆಗೆ ಹಾಗೂ ಅಪ್ಷನ್ ಎಂಟ್ರಿ ಮಾಡಲು ಅರ್ಹತೆ ಪಡೆಯುವುದಕ್ಕಾಗಿ ಎಲ್ಲಾ ದಾಖಲೆಗಳೊಂದಿಗೆ ನಿಗದಿಪಡಿಸಿರುವ **ಯಾವುದಾದರೂ ಸಹಾಯಕ ಕೇಂದ್ರದಲ್ಲಿ ಹಾಜರಾಗಬೇಕು. ಸಹಾಯಕ ಕೇಂದ್ರಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

3) ಅಭ್ಯರ್ಥಿಗಳು ದಾಖಲೆಗಳ ಪರೀಶೀಲನೆಗೆ ಸಂಬಂಧಿಸಿದಂತೆ ಗೊತ್ತುಪಡಿಸಿರುವ ವೇಳಾಪಟ್ಟಿ ಪ್ರಕಾರ ಖುದ್ದಾಗಿ ಹಾಜರಿರಬೇಕು ಅಂದರೆ ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲೂ ಅವಕಾಶ ನೀಡುವುದಿಲ್ಲ.

4) ವಿದ್ಯಾರ್ಥಿಗಳು ದಾಖಲೆಗಳ ಪರಿಶೀಲನೆಗೆ ಬರುವ ಸಮಯದಲ್ಲಿ ತಾವು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾದ ಎಲ್ಲಾ ಮೂಲ ದಾಖಲೆಗಳನ್ನು ಮತ್ತು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿರುವ ಅವುಗಳ ಜೆರಾಕ್ಸ್ ಪ್ರತಿಗಳ ಒಂದು ಸೆಟ್ಟನ್ನು ಕಡ್ಡಾಯವಾಗಿ ತರಬೇಕು. ಪರೀಶೀಲನೆಯ ದಿನದಂದು ಯಾವುದೇ ದಾಖಲೆ/ಪ್ರಮಾಣಪತ್ರ/ಅಂಕಪಟ್ಟಿಯನ್ನು ಹಾಜರುಪಡಿಸಲು ಯಾವುದೇ ವಿದ್ಯಾರ್ಥಿ ವಿಫಲನಾದ ಪಕ್ಷದಲ್ಲಿ ಅಂಥ ವಿದ್ಯಾರ್ಥಿಯ ದಾಖಲೆಗಳನ್ನು ಪರಿಶೀಲನೆ ಮಾಡುವುದಿಲ್ಲ ಮತ್ತು ಅವರ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಿಲ್ಲ. ಅನಂತರ ಸೀಟು ಆಯ್ಕೆಗೆ ಸಂಭಂದಿಸಿದಂತೆ ಆಪ್ಷನ್ ಎಂಟ್ರಿ ಮಾಡಲು ಅಂತಹ ಅಭ್ಯರ್ಥಿಗಳು ಅರ್ಹತೆ ಹೊಂದುವುದಿಲ್ಲ.

**ವಿಶೇಷ ಪ್ರವರ್ಗದ ಅಭ್ಯರ್ಥಿಗಳು ನಿಗದಿಪಡಿಸಿದ ದಿನಾಂಕಗಳಂದು ಸಂಬಂದಿಸಿದ ಪ್ರಮಾಣ ಪತ್ರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು ಕೇಂದ್ರದಲ್ಲಿ ಮಾತ್ರ ಸಲ್ಲಿಸಬೇಕು ವಿವರಗಳು ಈ ಕೆಳಗಿನಂತಿದೆ.**

| ದಿನಾಂಕ/ಸಮಯ | ವಿಶೇಷ ಪ್ರವರ್ಗ | ಪರಿಶೀಲನೆಯ ವಿವರ / ಪ್ರಮಾಣ ಪತ್ರಗಳನ್ನು ಸಲ್ಲಿಸುವುದು |
|---|---|---|
| 21.09.2019 ಬೆಳಿಗ್ಗೆ 11.00 | ಎನ್.ಸಿ.ಸಿ (NCC) | ಅಗತ್ಯವಿರುವ / ಸಂಭಂಧಿಸಿದ ಎನ್.ಸಿ.ಸಿ (NCC) ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು |
| | ಕ್ರೀಡೆ (SPORTS) | ಅಗತ್ಯವಿರುವ/ಸಂಭಂಧಿಸಿದ SPORTS ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. Those who have participated in games or sports at national level and above only |
| | ಸ್ಕೌಟ್ಸ್ ಅಂಡ್ ಗೈಡ್ಸ್ (Scouts & Guides.) | ರಾಷ್ಟ್ರಪತಿ ಪ್ರಶಸ್ತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಸಬೇಕು. President Award certificate only |
| 21.09.2019 ಬೆಳಿಗ್ಗೆ 12.00 | ಸೈನಿಕರು (Defence) | ಅಗತ್ಯವಿರುವ /ಸಂಬಂಧಿಸಿದ Defence ಪ್ರಮಾಣ ಪತ್ರಗಳನ್ನು ನಮೂನೆಯಲ್ಲಿರುವಂತೆ ಸಲ್ಲಿಸಬೇಕು Submission of Defence eligibility certificates as per the formats |
| 21.09.2019 ಬೆಳಿಗ್ಗೆ 12.00 | ಮಾಜಿ ಸೈನಿಕರು | ಸಂಬಂಧಪಟ್ಟ ಜಿಲ್ಲೆಯ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು ನೀಡಿರುವ ಮತ್ತು ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ.ಬೆಂಗಳೂರು. ಇವರು ಮೇಲುರುಜು ಮಾಡಿರುವ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು |
| 21.09.2019 ಬೆಳಿಗ್ಗೆ 12.00 | (Anglo Indian) | ಆಂಗ್ಲೋ–ಇಂಡಿಯನ್ ಸಮುದಾಯಕ್ಕೆ ಸೇರಿರುವ ವಿದ್ಯಾರ್ಥಿಗಳು, ಕರ್ನಾಟಕ ರಾಜ್ಯದಲ್ಲಿನ ಆಂಗ್ಲೋ–ಇಂಡಿಯನ್ ಸಮುದಾಯದ ನೊಂದಯಿತ ಒಕ್ಕೂಟ ನೀಡಿರುವ ಮತ್ತು ಸರ್ಕಾರದಿಂದ ನಾಮನಿರ್ದೇಶಿತರಾಗಿರುವ ಆಂಗ್ಲೋ–ಇಂಡಿಯನ್ ವಿಧಾನಸಭಾ ಸದಸ್ಯರ ಮೇಲುರುಜು ಮಾಡಿರುವ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು. |
| 23.09.2019 | ವಿಕಲಚೇತನರು (Person with disability) | ವೈದ್ಯಕೀಯ ತಪಾಸಣೆಗೆ ಹಾಜರಾಗುವ ಸಮಯ ಬೆಳಗ್ಗೆ 10.00 ಘಂಟೆಗೆ |

**ದಾಖಲೆ ಪರಿಶೀಲನೆ ವೇಳಾಪಟ್ಟಿ**

| ದಿನಾಂಕ | ಬೆಳಗಿನ ಅವಧಿ–1 ಬೆ.900 ರಿಂದ 11.00 ಹಾಜರಾಗುವ ಸಮಯ ಬೆ 8.45 ಕ್ರಮಸಂಖ್ಯೆಗಳು | | ಬೆಳಗಿನ ಅವಧಿ–2 ಬೆ.11.15 ರಿಂದ 1.15 ಹಾಜರಾಗುವ ಸಮಯ ಬೆ 10.45 ಕ್ರಮಸಂಖ್ಯೆಗಳು | | ಮಧ್ಯಾಹ್ನದ ಅವಧಿ–1 ಬೆ.200 ರಿಂದ 4.00 ಹಾಜರಾಗುವ ಸಮಯ ಬೆ 1.30 ಕ್ರಮಸಂಖ್ಯೆಗಳು | | ಮದ್ಯಾಹ್ನದ ಅವಧಿ–1 ಬೆ.4.15 ರಿಂದ 6.15 ಹಾಜರಾಗುವ ಸಮಯ ಮ 3.30 ಕ್ರಮಸಂಖ್ಯೆಗಳು | |
|---|---|---|---|---|---|---|---|---|
| | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ |
| 24.09.2019 | 1 | 700 | 701 | 1400 | 1401 | 2100 | 2101 | 2500 |
| 25.09.2019 | 2501 | 3200 | 3201 | 3900 | 3901 | 4600 | 4601 | 5000 |
| 26.09.2019 | 5001 | ಕೊನೆಯ ರ್‍ಯಾಂಕ್ | | | | | | |

5. ಅಭ್ಯರ್ಥಿಗಳು ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ

ಈ ಮುಂದೆ ಹೇಳಿರುವ ಮೂಲ ದಾಖಲೆಗಳು ಮತ್ತು ಗೆಜೆಟೆಡ್ ಅಧಿಕಾರಿಯಿಂದ ದೃಡೀಕರಿಸಿರುವ ಅವುಗಳ ಜೆರಾಕ್ಸ್ ಪ್ರತಿಗಳ ಒಂದು ಸೆಟ್ಟನ್ನು ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗಾಗಿ ಕಡ್ಡಾಯವಾಗಿ ಹಾಜರುಪಡಿಸಬೇಕು

i. ಭರ್ತಿ ಮಾಡಿ ಸಲ್ಲಿಸಿರುವ ಆನ್‌ಲೈನ್ ಅರ್ಜಿ ನಮೂನೆಯ ಅಂತಿಮ ಪ್ರತಿ.

ii. ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ.

iii. ದ್ವಿತಿಯ ಪಿಯುಸಿ /12ನೇ ತರಗತಿಯ ಅಂಕಪಟ್ಟಿ.

iv. 1 ರಿಂದ 12ನೇ ತರಗತಿಯವರೆಗೆ ಒಟ್ಟು 7 ವರ್ಷದ ವ್ಯಾಸಂಗ ಪ್ರಮಾಣಪತ್ರ.

- 1 ರಿಂದ 10ನೇ ತರಗತಿಯ ವ್ಯಾಸಂಗ ಪ್ರಮಾಣ ಪತ್ರಕ್ಕೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ ಮೇಲುರುಜು ಸಹಿ ಹೊಂದಿರಬೇಕು.
- ಪದವಿ ಪೂರ್ವ ವ್ಯಾಸಂಗ ಪ್ರಮಾಣ ಪತ್ರಕ್ಕೆ ಸಂಬಂದಿಸಿದ ಪದವಿ ಪೂರ್ವ ಉಪ ನಿರ್ದೇಶಕರ ಮೇಲುರುಜು ಸಹಿ ಹೊಂದಿರಬೇಕು.
- (CBSE / ICSE ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಬಿ.ಇ.ಓ ಅಥವಾ ಡಿ.ಡಿ.ಪಿ.ಯು ಮೇಲುರುಜು ಸಹಿ ಮಾಡುವ ಅಗತ್ಯವಿರುವುದಿಲ್ಲ)

v. ವರ್ಗಾವಣೆ ಪತ್ರ (TC) (ಅಭ್ಯರ್ಥಿಯು ಹೊಂದಿದ್ದಲ್ಲಿ ಮಾತ್ರ)

| | |
|---|---|
| | ಈ ಮುಂದಿನ ದಾಖಲೆಗಳನ್ನು ಅನ್ವಯವಾಗುವಂತಿದ್ದ ಪಕ್ಷದಲ್ಲಿ ಮಾತ್ರ ಹಾಜರುಪಡಿಸತಕ್ಕದ್ದು |
| VI | ಮೀಸಲಾತಿ ಪ್ರಯೋಜನಗಳನ್ನು ಕೋರುವುದಕ್ಕೆ ಸಂಭಂಧಿಸಿದಂತೆ ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದಿರುವ ಜಾತಿ ಪ್ರಮಾಣ ಪತ್ರ/ಜಾತಿ ಮತ್ತು ಆದಾಯ ಪ್ರಮಾಣಪತ್ರ/ಆದಾಯ ಪ್ರಮಾಣ ಪತ್ರಗಳು (ಆಧಿಕಾರವ್ಯಾಪ್ತಿಯಿರುವ ಸಂಬಂಧಪಟ್ಟ ತಹಸೀಲ್ದಾರ್‌ರವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂದರ್ಭದಲ್ಲಿ ನಮೂನೆ 'ಡಿ' ನಲ್ಲಿ ಮತ್ತು ಪ್ರವರ್ಗ-1ರ ಸಂದರ್ಭದಲ್ಲಿ ನಮೂನೆ 'ಇ' ನಲ್ಲಿ ಇತರ ಹಿಂದುಳಿದ ವರ್ಗಗಳಾದ 2ಎ,2ಬಿ,3ಎ ಮತ್ತು 3ಬಿಗಳಂತಹ ಸಂದಂರ್ಭದಲ್ಲಿ ನಮೂನೆ ಎಫ್ ನಲ್ಲಿ ನೀಡಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು) |
| ಸೂಚನೆ | ಅಲ್ಲದೆ ಮೀಸಲು ಪ್ರವರ್ಗದಡಿಯಲ್ಲಿ ಸೀಟನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ಕ್ಕೆ ಸೇರಿರುವ ವಿದ್ಯಾರ್ಥಿಗಳು, ಅಧಿಕಾರವ್ಯಾಪ್ತಿಯ ತಹಸೀಲ್ದಾರ್‌ರವರು ನೀಡಿರುವ ಆದಾಯ ಪ್ರಮಾಣಪತ್ರವನ್ನು ಸಹ ಪರಿಶೀಲನೆಗಾಗಿ ಹಾಜರುಪಡಿಸಬೇಕು.<br>ಆದರೆ, ವಿದ್ಯಾರ್ಥಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಮೀಸಲಾತಿ ಪ್ರಯೋಜನವನ್ನು ಕೋರಿದ್ದ ಪಕ್ಷದಲ್ಲಿ ಮಾತ್ರ ಅವರು ಜಾತಿ ಪ್ರವರ್ಗ ಮತ್ತು ಆದಾಯದ ಸೌಲಭ್ಯಗಳನ್ನು ಕೋರಲು ಅರ್ಹರಾಗಿರುತ್ತಾರೆ |
| VII | ಹೈದರಾಬಾದ್ – ಕರ್ನಾಟಕ ಪ್ರವೇಶ ಮಿಸಲಾತಿ (ಅನುಚೇದ 371 (ಜೆ) ಯನ್ನು ಕೋರುವ ವಿದ್ಯಾರ್ಥಿಗಳು ಸಂಬಂಧಪಟ್ಟ ಉಪ ವಿಭಾಗಧಿಕಾರಿ (ಅಸಿಸ್ಟೆಂಟ್ ಕಮಿಷನರ್)ಅವರು ಅನುಬಂಧ-ಎ (ಅರ್ಹತಾ ಪ್ರಮಾಣಪತ್ರ ನಿಯಮ 3(3) ರಲ್ಲಿ ನೀಡಿರುವ ಪ್ರಮಾಣಪತ್ರವನ್ನು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಸಲ್ಲಿಸಬೇಕು |
| VIII | ತಂದೆ-ತಾಯಿ/ಪೋಷಕರ ವಾಸ ಸ್ಥಳ/ವ್ಯಾಸಂಗ/ಉದ್ಯೋಗದ ಆಧಾರದ ಮೇಲೆ<br>ಸರ್ಕಾರಿ ಸೀಟುಗಳಿಗೆ ಸಂಭಂದಿಸಿದಂತೆ ಅರ್ಹತೆಯನ್ನು ಕೋರುವ ವಿದ್ಯಾರ್ಥಿಗಳು ಅವರ ತಂದೆ-ತಾಯಿ/ಪೋಷಕರ ವ್ಯಾಸಂಗ ಪ್ರಮಾಣಪತ್ರ/ತಂದೆ-ತಾಯಿ/ಪೋಷಕರ ಉದ್ಯೋಗ ಪ್ರಮಾಣಪತ್ರ/ತಂದೆ-ತಾಯಿ/ಪೋಷಕರ ಸಂಚಿತ ದಾಖಲೆ/ತಂದೆ-ತಾಯಿ/ಪೋಷಕರ ಸಂಚಿತ ದಾಖಲೆ/ತಂದೆ-ತಾಯಿ/ಪೋಷಕರ ಅಂಕಪಟ್ಟಿ ಮೊದಲಾದವುಗಳನ್ನು ಹಾಜರುಪಡಿಸಬೇಕು. |
| IX | ಹೊರನಾಡು ಮತ್ತು ಗಡಿನಾಡು ಕನ್ನಡಿಗ ಕೋಟಾದ ಅಡಿಯಲ್ಲಿ ಅರ್ಹತೆಯನ್ನು ಕೋರುವಂತಹ ವಿದ್ಯಾರ್ಥಿಗಳು ಯುಕ್ತವಾಗಿ ಘೋಷಿಸಿರುವ ಅಫಿಡವಿಟ್ಟನ್ನು ಹಾಜರುಪಡಿಸಬೇಕು |
| X | 1ನೇ ತರಗತಿಯಿಂದ 10ನೇ ತರಗತಿಯವರೆಗೆ ಹತ್ತು ಪೂರ್ಣಾವಧಿ ಶೈಕ್ಷಣಿಕ ವರ್ಷಗಳ ಕಾಲ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು (ಕನ್ನಡ ಮಾಧ್ಯಮ ಮೀಸಲಾತಿ ಪ್ರಯೋಜನವನ್ನು ಕೋರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ) ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಕನ್ನಡ ಮಾಧ್ಯಮ ಪ್ರಮಾಣಪತ್ರವನ್ನು ಸಲ್ಲಸಬೇಕು. |
| XI | ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಅಥವಾ ಕರ್ನಾಟಕ ಪೌರನಿಗಮಗಳ ಅಧಿನಿಯಮ 1976ರಲ್ಲಿ ಹೇಳಿರುವಂತೆ ಬೃಹತ್ ನಗರ ಪ್ರದೇಶ ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆಯ ಹಂತದಲ್ಲಿರುವ ಪ್ರದೇಶಗಳನ್ನು ಹೊರತುಪಡಿಸಿ, ಕರ್ನಾಟಕ ರಾಜ್ಯದಲ್ಲಿನ ಇತರ ಪ್ರದೇಶಗಳಲ್ಲಿ ಇರುವ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ 10 ಪೂರ್ಣಾವಧಿ ಶೈಕ್ಷಣಿಕ ವರ್ಷಗಳವರೆಗೆ ವ್ಯಾಸಂಗ ಮಾಡಿರುವಂತಹ ಗ್ರಾಮೀಣ ವಿದ್ಯಾರ್ಥಿಗಳು ಸಂಬಂದಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರ ಮತ್ತು ಪರಿಶೀಲನಾ ಪ್ರಮಾಣಪತ್ರ (ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ) |
| Special attention: | • The SC / ST/Category-I / 2A, 2B, 3A and 3B and other eligibility criteria is applicable to Karnataka candidates who are eligible to claim eligibility for Government seats under clauses (a), (b), (f), (h), (j), (k) and the same is not applicable to eligibility clauses (c), (d), (e), (g), (i) to claim Government Seats and Government quota seats.<br>• Reservation of seats in certain categories such as Rural, Kannada etc and in Special Categories such as NCC, Sports etc is applicable only to Karnataka candidates who are eligible for Government seats and Government Quota seats. |

## ವಿಕಲಚೇತನ ಅಭ್ಯರ್ಥಿಗಳಿಗೆ ಸೂಚನೆ

2019–20ನೇ ಸಾಲಿನ ಬಿ.ಎಸ್.ಸಿ ನರ್ಸಿಂಗ್, ಬಿ.ಪಿ.ಟಿ., ಬಿ.ಪಿ.ಒ ಮತ್ತು ಬಿ.ಎಸ್.ಸಿ ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳ ಪ್ರವೇಶಕ್ಕೆ ವಿಕಲಚೇತನ ಅಭ್ಯರ್ಥಿಗಳು ವೈದ್ಯಕೀಯ ಬೋರ್ಡ್, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವಂ ಬೆಂಗಳೂರು ಇಲ್ಲಿ ದಿನಾಂಕ:23–09–2019ರ ಬೆಳಗ್ಗೆ 10.00 ಘಂಟೆಗೆ ವಿಕಲಚೇತನಕ್ಕೆ ಸಂಬಂದಪಟ್ಟ ದಾಖಲೆಗಳೊಂದಿಗೆ ವೈದ್ಯಕೀಯ ತಪಾಸಣೆಗೆ ಹಾಜರಾಗಬೇಕು.

ವೈದ್ಯಕೀಯ ತಪಾಸಣೆಯಲ್ಲಿ ಅರ್ಹರಾದಲ್ಲಿ ಮಾತ್ರ ಅಭ್ಯರ್ಥಿಗಳು ವಿಕಲಚೇತನ ಕೋಟಾದ ಸೀಟು ಹಂಚಿಕೆಗೆ ಅರ್ಹತೆಯನ್ನು ಪಡೆಯುತ್ತಾರೆ. ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ https://kea.kar.nic.in ಬೇಟಿ ನೀಡಬಹುದಾಗಿದೆ.

## Attention to Persons with disability Candidates

Admission for the academic year 2019-20 to B. Sc Nursing, B.P.T, B.P.O, and B.Sc Allied Health Science Courses, Persons with disability candidates have to appear before Medical Board at Karnataka Examination Authority, Malleshwaram, Bengaluru on 23-09-2019 at 10.00 AM. Candidate has to present before the Medical Board with necessary documents related to disability. Further details visit the KEA website https://kea.kar.nic.in.

| | | |
|---|---|---|
| 23.09.2019 | ವಿಕಲಚೇತನರು<br>(Persons with disability) | ವೈದ್ಯಕೀಯ ತಪಾಸಣೆಗೆ<br>ಹಾಜರಾಗುವ ಸಮಯ ಬೆಳಗ್ಗೆ 10.00 ಘಂಟೆಗೆ |

ನಿರ್ದೇಶಕರು, ವೈದ್ಯಕೀಯ ಶಿಕ್ಷಣ

ದಿನಾಂಕ 17.09.2019

ಸ್ಥಳ:– ಬೆಂಗಳೂರು